**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ.1209/2024 ಪಿಡಬ್ಲ್ಯೂ 1**

**ದಿನಾಂಕ 29.07.2026**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿಪರ ವಕೀಲರಿಂದ**

ನಾನು 8 ನೇ ತರಗತಿವರೆಗೂ ಓದಿದ್ದೇನೆ. ನಮ್ಮ ಮನೆಯಲ್ಲಿ ಆರೋಪಿಯ ಮಗಳು ಕೆಲಸ ಮಾಡಲು ಬರುತ್ತಿದ್ದಳು, ಆರೋಪಿ ಸಹ ನಮ್ಮ ಮನೆಗೆ ಬರುತ್ತಿದ್ದರು ಹಾಗಾಗಿ ಆರೋಪಿ ನನಗೆ ಪರಿಚಯ. ನನಗೆ ಇಂಗ್ಲೀಷ ಓದಲು ಮತ್ತು ಬರೆಯಲು ಬರುವುದಿಲ್ಲ. ಪಿರ್ಯಾದನ್ನು ಇಂಗ್ಲೀಷ ಭಾಷೆಯಲ್ಲಿ ಬರೆದಿದ್ದಾರೆ ಎಂದರೆ ಸರಿ. ನಾನು ಹೇಳಿದ್ದನ್ನು ವಕೀಲರು ಬರೆದಿದ್ದಾರೆ ಹಾಗಾಗಿ ಅದರಲ್ಲಿ ಎನಿದೆ ಎಂದು ನನಗೆ ಮಾಹಿತಿ ಇದೆ.

ಆರೋಪಿ ಪ್ಲಾಸ್ಟಿಕ್ ವ್ಯಾಪಾರ ಮಾಡುತ್ತಿದ್ದರು ಎಂದು ನನಗೆ ತಿಳಿಸಿದ್ದರು. ನನಗೆ ನಾಗರತ್ನ ಎನ್ನುವವರ ಪರಿಚಯ ಇದೆ. ನನಗೆ ಬ್ಯಾಂಕ್ ಗಳ ವ್ಯವಹಾರಗಳ ಬಗ್ಗೆ ಮಾಹಿತಿ ಇದೆ. 20 ಸಾವಿರ ಕ್ಕಿಂತ ಹೆಚ್ಚು ವ್ಯವಹಾರ ಮಾಡಬೇಕಾದರೆ ಬ್ಯಾಂಕ ಅಂಕೌಂಟ್ ಮೂಲಕ ವ್ಯವಹಾರ ಮಾಡಬೇಕಾಗುತ್ತದೆ ಎಂದು ನನಗೆ ಗೊತ್ತಿಲ್ಲ.

ಆರೋಪಿ ನನಗೆ ಬ್ಯಾಂಕ್ ಆಫ್ ಬರೋಡದ ಚೆಕ್ ನ್ನು ನೀಡಿದ್ದಾರೆ. ನಿಪಿ 3 ರಲ್ಲಿ ಎನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ಹಣವನ್ನು ನೀಡಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ, ಹರಿಹರ.